ದಿನಾಂಕಃ 01-04-2024
(ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಎಸ್.ಎ. ಪರ ವಕೀಲರಿಂದಃ

ವಾದಿ ನನಗೆ ಅತ್ತೆ ಆಗಬೇಕು, ತಿರುಗಾಡಲು ದಾರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ದಾವೆ ಸಲ್ಲಿಸಿದ್ದಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೆ ನಂ 02/6 ಅದರ ವಿಸ್ತೀರ್ಣ 21 ಗುಂಟೆ, ಚಕ್ಕುಬಂದಿ ಪೂರ್ವಕ್ಕೆ ಬೆಳ್ಳುಪ್ಪೇಗೌಡರ ಸ್ವತ್ತು, ಪಶ್ಚಿಮಕ್ಕೆ ಸಿದಾಪ್ಪಾಜಿ ರವರ ಸ್ವತ್ತು, ದಕ್ಷಿಣಕ್ಕೆ ಶಿವಲಿಂಗಯ್ಯರವರ ಸ್ವತ್ತು, ಉತ್ತರಕ್ಕೆ ವಾದಿಯವರ ಸ್ವತ್ತು.

ವಾದಿಯವರ ಮಾವನ ಹೆಸರು ಮೊಡ್ಡಲಿಂಗೇಗೌಡ, ದಾವಾ ಸ್ವತ್ತಿನ ಮೂಲಕರ್ತ ಮೊಡ್ಡಲಿಂಗೇಗೌಡ ಅವರ ಹೆಂಡತಿ ಲಿಂಗಮ್ಮ, ಸದರಿಯವರಗೆ 5 ಜನ ಮಕ್ಕಳು ಅವರೆಂದರೆ ಮಂಚಮ್ಮ, ಒದೇಗೌಡ, ರಾಚೇಗೌಡ, ಪುಟ್ಟಸಿದ್ದಯ್ಯ ಮತ್ತು ನಾಗರತ್ನ. ವಾದಿಯು ರಾಚೇಗೌಡರ ಹೆಂಡತಿ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಮತ್ತು ಇತರೆ ಸ್ವತ್ತು ಮೊಡ್ಡಲಿಂಗೇಗೌಡರವರಿಗೆ ವಿಭಾಗದ ಮೂಲಕ ಬಂತು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡ ಮರಣ ಹೊಂದುವವರೆಗೂ ಒಟ್ಟು ಕುಂಟುಬಂದಲ್ಲಿಯೇ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಗಂಡ ಮರಣ ಹೊಂದಿದ್ದ ನಂತರ ಎಂ.ಆರ್.26/95-96 ರಂತೆ ಸರ್ವೆ ನಂ. 2/2 ರಲ್ಲಿ 22 ಗುಂಟೆ, ಸರ್ವೆ .ನಂ. 2/6 ರಲ್ಲಿ 22 ಗುಂಟೆ, ಸರ್ವೇ ನಂ. 156 ರಲ್ಲಿ 1 ಎಕರೆ 30 ಗುಂಟೆ, ಸರ್ವೆ. ನಂ. 88 ರಲ್ಲಿ 1 ಎಕರೆ 2 ಗುಂಟೆ, ಸರ್ವೆ ನಂ 44 ರಲ್ಲಿ 3 ಎಕರೆ, ಪಂಚಾಯಿತಿ ಪಾರಿಕತ್ ರಂತೆ ವಾದಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ.

ದಾವಾ ಷೆಡ್ಯೂಲ್ ಐಟಂ ನಂ.2 ಸರ್ವೆ ನಂ 2/6 ರಂತೆ ಖಾತೆ ಆಗುವ ಸಂದರ್ಭದಲ್ಲಿ 21 ಗುಂಟೆ ಎಂದು ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಷಡೂಲ್ 1 ಮತ್ತು ಐಟಂ .ನಂ.2 ರಲ್ಲಿ ಇಂದಿಗೂ ಕೂಡ ವಾದಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ 2 ರಲ್ಲಿ ವಾದಿಯು ಲೋನ್ ಪಡೆದು ಕೊಂಡು ಶೀಟ್ ನ ಮನೆ ನಿರ್ಮಾಣ ಮಾಡಿ ವಾಸವಾಗಿದ್ದಾರೆ ಎಂದರೆ ಸರಿ. ನಾವು ವಾದಿ ಮನೆಯ ದಕ್ಷಿಣ ಭಾಗದಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನಮ್ಮ ಮಾವನ ಹೆಸರು ಮಿಲಿಟರಿ ಒದೇಗೌಡ. ವಾದಿ ಸ್ವಾಧೀನಾನುಭವದಲ್ಲಿರುವ ಸ್ವತ್ತಿಗೆ ತೊಂದರೆ ಕೊಡುತ್ತಿದೀರ ಎಂದರೆ ನಾವು ಯಾವುದೇ ತೊಂದರೆ ಕೊಡುತ್ತಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಮನೆಯ ದಕ್ಷಿಣ ದಿಕ್ಕಿನಲ್ಲಿ ರಾಜ ಬೀದಿ ಎಂದರೆ ಸರಿ. ನಮ್ಮ ಮನೆ ಇದೆ ಓಡಾಡಲು ಪಂಚಾಯಿತಿ

ರಸ್ತೆ ಇಲ್ಲ. ನಾವು ಓಡಾಡಲು ನಮ್ಮ ಸ್ವತ್ತಿನಲ್ಲಿ ಜಾಗ ಬಿಟ್ಟು ಕೊಂಡಿದ್ದೇವೆ. ನಮಗೆ ಪಾಂಚಾಯಿತಿ ಪಾರಿಕತ್ ನಕಲು ಪ್ರತಿ ನೀಡಿದ್ದು ಅದನ್ನು ನಾನು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ.

ನಮ್ಮ ಮುಖ್ಯ ವಿಚಾರಣಾ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ನಮ್ಮ ಅತ್ತೆ ಮಾವ ನವರಿಗೆ ಪೂರ್ವ-ಪಶ್ಚಿಮ 50 ಅಡಿಗಳು, ಉತ್ತರ -ದಕ್ಷಿಣ 65 ಅಡಿಗಳು ವಿಭಾಗದ ಮೂಲಕ ಬಂದಿದೆ. ಸರ್ವೇ ನಂ.2/6 ರ ಸ್ವತ್ತಿಗೆ ಸಂಬಂಧಿಸಿದಂತೆ ನಿಮ್ಮ ಮಾವನವರ ಹೆಸರಿನಲ್ಲಿ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿ ಅದು ಸರ್ವೆ ನಂಬರ್ ಸ್ವತ್ತಲ್ಲ ಎಂದು ನುಡಿದಿರುತ್ತಾರೆ. ಸದರಿ ಸ್ವತ್ತು ಗ್ರಾಮ ಠಾಣೆಗೆ ಸೇರಿದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ಸಾಕ್ಷಿ ನೀವು ಯಾವ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಯಾವುದು ಇಲ್ಲ ಎಂದು ನುಡಿದಿರುತ್ತಾರೆ. ನಮ್ಮ ಮಾವನವರಿಗೆ ವಿಭಾಗದಲ್ಲಿ ಯಾವ ಯಾವ ಸ್ವತ್ತು ಬಂದಿದೆ ಎಂಬುದರ ಬಗ್ಗೆ ದಾಖಲಾತಿಗಳು ನನಗೆ ಗೊತ್ತಿಲ್ಲ. ನಾವು ವಾಸವಾಗಿರುವ ಮನೆ ನಮ್ಮ ಮಾವನವರೂ ಇದ್ದ ಕಾಲದಲ್ಲೇ ನಿರ್ಮಾಣ ಮಾಡಿದ್ದು ಅದಕ್ಕೆ ಲೈಸನ್ಸ್ ಪಡೆದಿದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ನಿ.ಡಿ.21 ರಿಂದ 25 ಡಿಮ್ಯಾಂಡ್ ರಿಜಿಸ್ಟರ್ ಗಳಲ್ಲಿ ಇರುವ ಗಂಗಮ್ಮ, ನಿಂಗಮ್ಮ ನಮ್ಮ ಅತ್ತೆ. ಯಾವ ದಾಖಲಾತಿಗಳ ಆಧಾರದ ಮೇಲೆ ಸದರಿ ದಾಖಲಾತಿ ಮಾಡಿದ್ದಾರೆ ಎಂದರೆ ಗೊತಿಲ್ಲ. ಸದರಿ ದಾಖಲತಿಗಳನ್ನು ನಾನೇ ಹಾಜರುಪಡಿಸಿದ್ದೇನೆ.

**(ಪಾಟಿ ಸವಾಲಿಗ ಸಮಯ ಕೋರಿದ್ದು ಸಮಯ ನೀಡ ಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.